ಪೊಲೀಸರ ಅನುಚಿತ ವರ್ತನೆ ವಿರುದ್ಧ ಗೃಹಸಚಿವ ಬೊಮ್ಮಾಯಿಗೆ ಶಾಸಕ ಎಂ.ಪಿ. ಕುಮಾರಸ್ವಾಮಿ ದೂರು

# ಮಾಸ್ಕ್ ಅವಾಂತರ, ಶಾಸಕರ ಮೇಲೆ ದಂಡಾಸ್ತ್ರ

■ ವಿಕ ಸುದ್ದಿಲೋಕ ಬೆಂಗಳೂರು

ಸರಿಯಾಗಿ ಮಾಸ್ಕ್ ಧರಿಸಿಲ್ಲ ಎಂದು ಆರೋಪಿಸಿ ಮೂಡಿಗೆರೆ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರ ಕಾರು ನಿಲ್ಲಿಸಿದ ಶೇಷಾದ್ರಿಪುರ ಪೊಲೀಸರು, 250 ರೂ. ದಂಡ ವಿಧಿಸಿದ್ದಾರೆ. ಆದರೆ, ಪೊಲೀಸರ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿರುವ ಶಾಸಕರು, ಗೃಹ ಸಚಿವರಿಗೆ ಪೊಲೀಸರ ವಿರುದ್ಧ ದೂರು ನೀಡಿದ್ದಾರೆ. ಗುರುವಾರ ಮಧ್ಯಾಹ್ನ 12.30ರಲ್ಲಿ ಶೇಷಾದ್ರಿಪುರ ಪೊಲೀಸ್ ಠಾಣೆ ಎದುರಿನ ಸಿಗ್ನಲ್‌ನಲ್ಲಿ ಘಟನೆ ನಡೆದಿದೆ.

''ಡಿ.24ರಂದು / ಮಧ್ಯಾಹ್ನ ಬಾಡಿಗೆ ಕಾರಿನಲ್ಲಿ ಶೇಷಾದ್ರಿಪುರ ಕಡೆಯಿಂದ ಶಾಸಕರ ಭವನಕ್ಕೆ ತೆರಳುತ್ತಿದ್ದೆ. ಶೇಷಾದ್ರಿಪುರ ಪೊಲೀಸ್ ಠಾಣೆ ಎದುರು ಸಂಚಾರ ವ್ಯತ್ಯಯವಾಗಿ ಕಾರು ನಿಂತಿತು. ಈ ವೇಳೆ ಅಲ್ಲೇ ಇದ್ದ ಪೊಲೀಸರು ಟಿಂಟ್ ಇದೆ ಗಾಜು ಇಳಿಸು ಎಂದು ದರ್ಪದಿಂದ ನುಡಿದರು. ಗಾಜು ಇಳಿಸಿದ ನಂತರ ನಾನು ಮಾಸ್ಕ್ ಸರಿಯಾಗಿ ಧರಿಸಿಲ್ಲವೆಂದು ಹೇಳಿ 250 ರೂ. ದಂಡ ವಿಧಿಸಿದರು. ಸಹಜವಾಗಿ ಮಾತನಾಡುವ ಬದಲು ಜೋರಾಗಿ ಮಾತನಾಡುತ್ತಿದ್ದರು. ಜವಾಬ್ದಾರಿಯುತ ವ್ಯಕ್ತಿಯಾದ ನಾನು ಮುಜುಗರಕ್ಕೊಳಗಾಗಿ ಮರು ಮಾತನಾಡದೆ ದಂಡ ಕಟ್ಟಿದ್ದೇನೆ. ಆದರೆ, ಪೊಲೀಸರ ವರ್ತನೆ ಸರಿಯಿರಲಿಲ್ಲ'' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.



''ದಂಡ ಕಟ್ಟಿ ಎಂದು ಹೇಳಿದರೆ ಸಾಕಿತ್ತು. ಅದನ್ನು ಬಿಟ್ಟು ನನ್ನ ಮೇಲೆ ಜೋರು ಮಾಡಿದರು. ಶಾಸಕರೆಂದು ಚಾಲಕ ಹೇಳಿದರೂ ಪೊಲೀಸರು ಅನುಚಿತ ವರ್ತನೆ ತೋರಿದರು. ಜನಪ್ರತಿನಿಧಿಗಳ ಪರಿಸ್ಥಿತಿಯೇ ಹೀಗಾದರೆ ಜನಸಾಮಾನ್ಯರ ಪಾಡೇನು? ಹೀಗಾಗಿ, ಗೃಹ ಸಚಿವರಿಗೆ ದೂರು ನೀಡಿದ್ದೇನೆ'' ಎಂದು ಶಾಸಕ ಎಂ.ಪಿ ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಾಸ್ಕ್ ದಂಡದ ನೆಪದಲ್ಲಿ ಶಾಸಕರ ಜತೆ ಪೊಲೀಸರು ಅನುಚಿತ ವರ್ತನೆ ತೋರಿರುವ ಕುರಿತು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿಚಾರಣೆ ನಡೆಸುತ್ತಿದ್ದಾರೆ.

**ನಗರದ ಹಲವೆಡೆ ಟ್ರಾಫಿಕ್ ಜಾಮ್:** ಕೋವಿಡ್-19 ಮಾಸ್ಕ್ ಧರಿಸುವ ನಿಯಮ ಪಾಲನೆ ನೆಪದಲ್ಲಿ ಕಾನೂನು ಸುವ್ಯವಸ್ಥೆ ಮತ್ತು ಸಂಚಾರ ಪೊಲೀಸರು ರಸ್ತೆ ಬದಿಯಲ್ಲಿ ವಾಹನ ಸವಾರರನ್ನು ತಡೆದು ದಂಡ ವಿಧಿಸುತ್ತಾರೆ. ಆದರೆ, ಇದರಿಂದ ಟ್ರಾಫಿಕ್ ಜಾಮ್ ಉಂಟಾಗಿ ಜನರಿಗೆ ಅನಾನುಕೂಲ ಆಗುತ್ತಿದೆ. ಶೇಷಾದ್ರಿಪುರ ಠಾಣೆ ಎದುರು ಸಿಗ್ನಲ್ ಇದೆ. ಸಿಗ್ನಲ್‌ನಲ್ಲೇ ಪ್ರತಿನಿತ್ಯ ನಿಲ್ಲುವ ಪೊಲೀಸರು, ರೆಡ್ ಸಿಗ್ನಲ್‌ನಲ್ಲಿ ವಾಹನಗಳು ನಿಂತಿರುವ ಕಡೆ ತೆರಳಿ ಸವಾರರು, ಚಾಲಕರನ್ನು ಹುಡುಕಿ ಮಾಸ್ಕ್ ಧರಿಸಿಲ್ಲ ಎಂದು ದಂಡ ವಿಧಿಸುತ್ತಾರೆ. ಈ ವೇಳೆ ಸಿಗ್ನಲ್‌ನಲ್ಲೇ ವಾಹನ ನಿಲ್ಲಿಸುವ ಕಾರಣ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಟ್ರಾಫಿಕ್ ಜಾಮ್ ಆಗಿದ್ದರೂ ತಲೆಕೆಡಿಸಿಕೊಳ್ಳದೇ ಏನೂ ಆಗಿಲ್ಲ ಎನ್ನುವಂತೆ ಪೊಲೀಸರು ದಂಡ ವಿಧಿಸುತ್ತಾರೆ. ಈ ಕ್ರಮಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ವಸೂಲಿ ದಂಧೆ: ಇಬ್ಬರು ಪೊಲೀಸರ ಅಮಾನತು

**ಮೈಸೂರು:** ಬೀದಿ ಬದಿ ವ್ಯಾಪಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪದ ಮೇರೆಗೆ ಮೈಸೂರು ನಗರದ ಲಷ್ಕರ್ ಪೊಲೀಸ್ ಠಾಣೆಯ ಎಎಸ್‌ಐ ಕುಮಾರಸ್ವಾಮಿ ಮತ್ತು ಪೇದೆ ಮಣಿಕಂಠ ಅವರನ್ನು ಅಮಾನತು ಮಾಡಲಾಗಿದೆ. ಕೆಲವು ದಿನಗಳ ಹಿಂದೆ ಇವರಿಬ್ಬರು ಗಾಂಧಿ ಚೌಕದ ಬಳಿ ರಸ್ತೆ ಬದಿ ವ್ಯಾಪಾರಿಗಳಿಂದ ಹಣ ವಸೂಲಿ ಮಾಡುತ್ತಿರುವ ದೃಶ್ಯವನ್ನು ಸಾರ್ವಜನಿಕರೊಬ್ಬರು ಸೆರೆ ಹಿಡಿದಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ನಗರ ಪೊಲೀಸ್ ಆಯುಕ್ತ ಡಾ.ಚಂದ್ರ ಗುಪ್ತ ಅವರು ಇಬ್ಬರನ್ನು ಅಮಾನತುಗೊಳಿಸಿ ಆದೇಶ ಮಾಡಿದ್ದಾರೆ.



ವಾಹನ ಸವಾರರಿಗೆ ಸಂಚಾರ ಪೊಲೀಸರು ಸಿಂಹ ಸ್ವಪ್ನವಾಗಿದ್ದಾರೆ. ಬಲೆ ಹಾಕಿ ಪ್ರಾಣಿಗಳನ್ನು ಹಿಡಿಯುವಂತೆ ಹಿಡಿದು ದಂಡ ಕಕ್ಕಿಸುತ್ತಾರೆ. ಹೆಲ್ಮೆಟ್ ಇದ್ದರೂ ಮಾಸ್ಕ್ ಸರಿಯಾಗಿ ಧರಿಸಿಲ್ಲ ಎಂದು ನೆಪ ಹೇಳಿ ಹಣ ವಸೂಲಿ ಮಾಡುತ್ತಿದ್ದಾರೆ. ಕೋವಿಡ್ ನಿಯಂತ್ರಣಕ್ಕಿಂತ ದಂಡ ವಸೂಲಿಯೇ ಇಲಾಖೆಯ ಪ್ರಧಾನ ಆದ್ಯತೆಯಾಗಿರುವಂತೆ ಕಾಣುತ್ತದೆ.

**-ಸಂತೋಷ್ ಬಿ.ಎಂ.** ವಾಹನ ಸವಾರ



ಮಾಸ್ಕ್ ಧರಿಸಿದ್ದೆ. ಆದರೆ, ಮಾಸ್ಕ್ ಸರಿಯಾಗಿ ಧರಿಸಿಲ್ಲವೆಂದು ದಂಡ ವಿಧಿಸಿದರು. ಪೊಲೀಸರ ವರ್ತನೆಯಲ್ಲಿ ಶಿಷ್ಟಾಚಾರವಿರಲಿಲ್ಲ.

**- ಎಂ.ಪಿ ಕುಮಾರಸ್ವಾಮಿ**
ಶಾಸಕ ಮೂಡಿಗೆರೆ